ಎಂ.ಸಿ. ನಂ. 63/2023 PW-1

(ಇಂದು ದಿನಾಂಕಃ 01-12-2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.SSA ವಕೀಲರಿಂದಃ**

ನನ್ನ ತವರು ಮನೆ ಅಫಜಲಪೂರು ತಾಲೂಕು ಗೌರಬೀ. ನನ್ನ ಗಂಡನ ಮನೆ ವಿಜಯಪೂರ ಜಿಲ್ಲೆಯ ಸಿಂಧಗಿ ತಾಲೂಕಿನ ಬ್ಯಾಕೋಡ ಗ್ರಾಮ. ನಾನು ಈಗ ಕಲಬುರಗಿಯಲ್ಲಿ ಮಗಳ ಜೊತೆ ವಾಸ ಇದ್ದೇನೆ. ನನ್ನ ಆಧಾರ ಕಾರ್ಡ, ಮತದಾರರ ಚೀಟಿ ಜೇವರ್ಗಿ ವಿಳಾಸಕ್ಕೆ ಇವೆ. ನಾನು ಚಿಂಚೋಳಿ ತಾಲೂಕಿನಲ್ಲಿ ವಾಸ ಇದ್ದೇನೆ ಎಂದು ತೋರಿಸಲು ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಇಲಾಖೆ ಗುರುತಿನ ಚೀಟಿ ಇದೆ ಎಂದು ಹೇಳುತ್ತಾರೆ. ಚಿಂಚೋಳಿ ತಾಲೂಕಿನಲ್ಲಿ ನಮ್ಮ ಮನೆ ಇಲ್ಲ, ಕಾಳಗಿಯಲ್ಲಿ ನನಗೆ ಸೇರಿದ ಒಂದು ಪ್ಲಾಟ ಇದೆ. ಕಾಳಗಿ ತಾಲೂಕ ಎಂದರೆ ಸರಿ. ಸದರಿ ಪ್ಲಾಟನ್ನು ನಾನೇ ಖರೀದಿ ಮಾಡಿದ್ದೇನೆ. ಎದುರುದಾರ ನನ್ನ ಸಹೋದರ ಅತ್ತೆ ಮಗ. ನನ್ನ ಮದುವೆ ಆದಾಗ ನಾನು ದ್ವಿತೀಯ ಪಿಯುಸಿ ಪಾಸಾಗಿದ್ದೆ. ನಾನು ಈಗ MA, BED ಪದವೀಧರೆ ಎಂದರೆ ಸರಿ. PUC ನಂತರ ಉನ್ನತ ಶಿಕ್ಷಣವನ್ನು ಮದುವೆ ನಂತರ ಪಡೆದುಕೊಂಡಿದ್ದೇನೆ ಎಂದರೆ ಸರಿ. ನನಗೆ ಉನ್ನತ ಶಿಕ್ಷಣ ನನ್ನ ಗಂಡ ಓದಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆ ಓದಿಸಿದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆ ಕಾಲೇಜು ಫೀಸು ಕಟ್ಟಿದ ಬಗ್ಗೆ ರಶೀದಿ ಹಾಜರು ಪಡಿಸಿಲ್ಲ. ಎದುರುದಾರ ನನ್ನನ್ನು ಓದಿಸಿ ನನಗೆ ನೌಕರಿ ಕೊಡಿಸಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮದುವೆಕ ಕಾಲಕ್ಕೆ ನನ್ನ ತಂದೆ ತಾಯಿ ನನಗೆ ಐದು ತೊಲಿ ಬಂಗಾರ ಮತ್ತು 50,000 ರೂ. ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಂಗಾರ ಖರೀದಿ ಮಾಡಿದ ಬಗ್ಗೆ ರಸೀದಿ ಹಾಜರು ಪಡಿಸಿಲ್ಲ. ಮದುವೆ ನಂತರ ನನ್ನ ಗಂಡ ನನಗೆ ಹೊಡಿ ಬಡಿ ಮಾಡುತ್ತಿದ್ದ ಕುಡಿದು ಬಂದ ಚಿತ್ರಹಿಂಸೆ ನೀಡುತ್ತಿದ್ದ, ಕೆಟ್ಟದಾಗಿ ಬೈಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಪೋಲೀಸರಿಗೆ ದೂರು ನೀಡಿಲ್ಲ. ಸಾಕ್ಷಿ ಮುಂದುವರಿದು ಸಂಬಂಧಿಕರು ಬಂದು ಬಗೆಹರಿಸಿದರು ಎಂದು ಹೇಳುತ್ತಾರೆ. ನನ್ನ ಗಂಡ ವರದಕ್ಷಿಣೆ ತರುವಂತೆ ನನಗೆ ಯಾವ ದಿನ ಹೊಡೆದರು ಎಂದು ನೆನಪಿಲ್ಲ. ಸುಮಾರ 8-10 ಬಾರಿ ಪಂಚಾಯಿತಿ ಆಗಿದೆ. ಪಂಚಾಯಿತಿ ಆದ ದಿನಾಂಕಗಳು ನೆನಪಿಲ್ಲ. ನನ್ನ ಮಗಳು ದ್ವಿತೀಯ ಪಿಯುಸಿ ಉತ್ತೀರ್ಣಗೊಂಡು ನೀಟ್ ಪರೀಕ್ಷೆ ತೆಗೆದುಕೊಂಡಿದ್ದಾಳೆ. ನಾನು ಈ ಅರ್ಜಿ ಸಲ್ಲಿಸಿದ ನಂತರ ಕೂಡ ಎದುರುದಾರ ನನ್ನ ಮಗಳನ್ನು ಭೇಟಿ ಆಗುವುದು ಮತ್ತು ಮಾತನಾಡುವುದು ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳ ಶಿಕ್ಷಣಕ್ಕಾಗಿ ಎದುರುದಾರ

ಹಣಕಾಸಿನ ಸಹಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಇವತ್ತಿಗೂ ನನ್ನ ಮಗಳಿಗೆ ಎದುರುದಾರನ ಜೊತೆ ಮಾತನಾಡುವುದು ಇಷ್ಟ ಇದೆ ಆದರೆ ನಾನು ಅವಳನ್ನು ಹೆದರಿಸಿ ಮಾತನಾಡದಂತೆ ಹೇಳಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ಎದುರುದಾರನ ನಡುವೆ ಹೊಂದಾಣಿಕೆ ಇಲ್ಲ, ಆತನಿಂದ ನನಗೆ ಪ್ರಾಣ ಬೆದರಿಕೆ ಇದೆ ಮತ್ತು ನೌಕರಿ ಕಿರಿಕಿರಿ ಇದೆ. ಕಾರಣ ಈ ಅರ್ಜಿ ಸಲ್ಲಿಸಿದ್ದೇನೆ. ನನ್ನ ಗಂಡ ಇವತ್ತಿಗೂ ನನ್ನ ಜೊತೆ ಜೀವನ ಮಾಡಲು ತಯಾರಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ತಯಾರಿಲ್ಲ ಎಂದು ಹೇಳುತ್ತಾರೆ. ನನಗೆ ಸರ್ಕಾರಿ ನೌಕರಿ ಮತ್ತು ಹೆಚ್ಚಿನ ಸಂಬಳ ಇರುವ ಕಾರಣ ಸ್ವತಂತ್ರವಾಗಿ ಬದುಕಬೇಕೆಂದು ಎದುರುದಾರನನ್ನು ನಾನೇ ನಿರ್ಲಕ್ಷ ಮಾಡಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ನನಗೆ ಮಾನಸಿ ಮತ್ತು ದೈಹಿಕ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. ನಾನೇ ನನ್ನ ಗಂಡನನ್ನು ಬಿಟ್ಟು ತವರು ಮನೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ ನಾನು ಜೊತೆಗೆ ಬಂದರೆ ಎದುರುದಾರ ಕರೆದುಕೊಂಡು ಹೋಗಲು ಸಿದ್ದರಿದ್ದಾರೆ ಎಂದರೆ ನಾನು ತಯಾರಿಲ್ಲ ಎಂದು ಹೇಳುತ್ತಾರೆ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.